प्रेस प्रकाशनी PRESS RELEASE

भारतीय रिज़र्व बैंक
RESERVE BANK OF INDIA

वेबसाइट : www.rbi.org.in/hindi
Website : www.rbi.org.in
ई-मेल/email : helpdoc@rbi.org.in

संचार विभाग, केंद्रीय कार्यालय, शहीद भगत सिंह मार्ग, फोर्ट, मुंबई - 400 001
**Department of Communication**, Central Office, Shahid Bhagat Singh Marg, Fort, Mumbai - 400 001 फोन/Phone: 022 - 2266 0502

03 ಜೂನ್ 2024

# ಕರ್ನಾಟಕದ ರೋಣದ ದಿ ರೋಣ ತಾಲೂಕ ಪ್ರಾಥಮಿಕ ಶಿಕ್ಷಕರ ಸಹಕಾರಿ ಬ್ಯಾಂಕ್ ನಿಯಮಿತ- ಈ ಬ್ಯಾಂಕಿಗೆ ಆರ್ ಬಿ ಐ ವಿತ್ತೀಯ ದಂಡ ವಿಧಿಸಿದೆ

'ವಂಚನೆ ನಿಗಾ ಮತ್ತು ವರದಿ ವ್ಯವಸ್ಥೆ' ಮತ್ತು 'ನಾಮಿನಲ್ ಸದಸ್ಯತ್ವದ ನೀತಿ ಮತ್ತು ಆಚರಣೆ' ಕುರಿತು ತನ್ನ ಕೆಲವು ನಿರ್ದೇಶನಗಳ ಅನುಪಾಲನೆ ಮಾಡದೇ ಇದ್ದುದಕ್ಕಾಗಿ ಭಾರತೀಯ ರಿಸರ್ವ್ ಬ್ಯಾಂಕ್ ತನ್ನ ಮೇ 22, 2024ರ ಆದೇಶದ ಮೂಲಕ ಕರ್ನಾಟಕದ ರೋಣದ ದಿ ರೋಣ ತಾಲೂಕ ಪ್ರಾಥಮಿಕ ಶಿಕ್ಷಕರ ಸಹಕಾರಿ ಬ್ಯಾಂಕ್ ನಿಯಮಿತ–ಈ ಬ್ಯಾಂಕಿಗೆ (ಬ್ಯಾಂಕು) ರೂ. 75,000/- ಗಳ (ರೂ. ಎಪ್ಪತ್ತೈದು ಸಾವಿರ ಮಾತ್ರ) ದಂಡ ವಿಧಿಸಿದೆ. ಬ್ಯಾಂಕಿಂಗ್ ನಿಯಂತ್ರಣ ಅಧಿನಿಯಮ 1949ರ ಕಲಂ 46(4) (i) ಮತ್ತು 56 ರ ಜೊತೆಗೆ ಓದಲಾದ ಕಲಂ 47 ಎ(1)(ಸಿ) ಪ್ರಕಾರ ತನಗೆ ಪ್ರದತ್ತವಾದ ಅಧಿಕಾರವನ್ನು ಚಲಾಯಿಸಿ ಈ ದಂಡವನ್ನು ಭಾರತೀಯ ರಿಸರ್ವ್ ಬ್ಯಾಂಕ್ ವಿಧಿಸಿದೆ.

ದಿನಾಂಕ ಮಾರ್ಚ್ 31, 2022 ರಂದು ಇದ್ದ ಬ್ಯಾಂಕಿನ ಆರ್ಥಿಕ ಪರಿಸ್ಥಿತಿಯ ಶಾಸನಬದ್ಧ ನಿರೀಕ್ಷಣೆಯನ್ನು ಭಾರತೀಯ ರಿಸರ್ವ್ ಬ್ಯಾಂಕ್ ನಡೆಸಿತು. ರಿಸರ್ವ್ ಬ್ಯಾಂಕಿನ ನಿರ್ದೇಶನಗಳ ಅನುಪಾಲನೆಯಾಗಿಲ್ಲ ಎಂಬ ಮೇಲ್ವಿಚಾರಣಾ ಶೋಧನೆಗಳನ್ನು ಆಧರಿಸಿ ಮತ್ತು ಈ ಸಂಬಂಧ ನಡೆದ ಪತ್ರ ವ್ಯವಹಾರವನ್ನು ಪರಿಗಣಿಸಿ ಈ ನಿರ್ದೇಶನಗಳ ಅನುಪಾಲನೆಯಲ್ಲಿ ಆದ ವಿಫಲತೆಗಾಗಿ ಬ್ಯಾಂಕಿಗೆ ಏಕೆ ದಂಡ ವಿಧಿಸಬಾರದು ಎಂಬುದಕ್ಕೆ ಕಾರಣ ಕೇಳಿ ನೋಟೀಸ್ ಒಂದನ್ನು ಜಾರಿ ಮಾಡಲಾಯಿತು. ಬ್ಯಾಂಕು ಈ ನೋಟೀಸಿಗೆ ಸಲ್ಲಿಸಿದ ಉತ್ತರ, ವೈಯಕ್ತಿಕ ವಿಚಾರಣೆಯ ಸಂದರ್ಭದಲ್ಲಿ ಸಲ್ಲಿಸಿದ ಮೌಖಿಕ ಸಮಜಾಯಿಷಿಗಳನ್ನು ಪರಿಗಣಿಸಿದ ನಂತರ, ಬ್ಯಾಂಕಿನ ವಿರುದ್ಧ ಮಾಡಲಾದ ಈ ಆಪಾದನೆಗಳು ಪುಷ್ಟೀಕರಣಗೊಂಡಿವೆಯೆಂದು ಮತ್ತು ದಂಡ ವಿಧಿಸುವುದು ಸಮುಚಿತವಾಗಿದೆಯೆಂದೂ ಗೊತ್ತಾಯಿತು. ಬ್ಯಾಂಕು, ಇತರ ವಿಷಯಗಳ ನಡುವೆ, (i) ವಂಚನೆ ಪ್ರಕರಣಗಳನ್ನು ಭಾರತೀಯ ರಿಸರ್ವ್ ಬ್ಯಾಂಕಿಗೆ ವರದಿ ಮಾಡಿರಲಿಲ್ಲ. (ii) ಒಟ್ಟು ಕ್ರಮಬದ್ಧ (ರೆಗ್ಯುಲರ್) ಸದಸ್ಯರ ಸಂಖ್ಯೆಗೆ ಅನುಪಾತವಾಗಿ ಹೊಂದಿರಬಹುದಾದ ನಾಮಿನಲ್ ಸದಸ್ಯರ ಮಿತಿಯನ್ನು ಮೀರಿತ್ತು.

ಈ ಮೇಲಿನ ಕ್ರಮವು ನಿಯಂತ್ರಣ ಅನುಪಾಲನೆಯಲ್ಲಿ ಆದ ಕೊರತೆಗಳ ವಿರುದ್ಧದ ಕ್ರಮ ಮಾತ್ರ ಆಗಿದೆಯೇ ವಿನಃ ಬ್ಯಾಂಕು ತನ್ನ ಗ್ರಾಹಕರೊಂದಿಗೆ ನಡೆಸುವ ಯಾವುದೇ ವ್ಯವಹಾರ/ಒಪ್ಪಂದಗಳ ಬಗೆಗಿನ ಸಿಂಧುತ್ವದ ಬಗ್ಗೆ ಅಭಿಪ್ರಾಯವಲ್ಲ. ಅಲ್ಲದೆ, ಈ ದಂಡ ವಿಧಿಸುವ ಕ್ರಮವು ಭಾರತೀಯ ರಿಸರ್ವ್ ಬ್ಯಾಂಕು ಈ ಬ್ಯಾಂಕಿನ ವಿರುದ್ಧ ಮುಂದೆ ಕೈಗೊಳ್ಳಬಹುದಾದ ಮತ್ಯಾವುದೇ ಕ್ರಮದ ಬಗೆಗಿನ ಪೂರ್ವಾಗ್ರಹದಿಂದ ಮುಕ್ತವಾಗಿದೆ.

**(ಪುನೀತ್ ಪಾಂಚೋಲಿ)**
ಚೀಫ್ ಜನರಲ್ ಮ್ಯಾನೇಜರ್

**ಪತ್ರಿಕಾ ಪ್ರಕಟಣೆ: 2024-2025/427**